ಪಿಡಬ್ಲ್ಯು: 1

ಸಾಕ್ಷಿಗೆ ಇಂದು ದಿನಾಂಕ: 08-03-2019 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದು ವರೆದ ಪಾಟೀ ಸವಾಲು: ಶ್ರೀ SNP ಆರೋಪಿ ಪರ ವಕೀಲರಿಂದ

1. ನಾನು ಆರೋಪಿ ಮತ್ತು ಆತನ ಸಹೋದರನಿಗೆ ಬರೆದುಕೊಟ್ಟಂತಹ ಖರೀದಿ ಪತ್ರದಲ್ಲಿ ಶಿನೊಳ್ಳಿಯ ವಿಳಾಸ ನಮೂದು ಇದೆ ಎಂದರೆ ಸರಿ. ಇನ್ನೊಂದು ಖರೀದಿ ಪತ್ರದಲ್ಲಿಯೂ ಸಹ ಶಿನೊಳ್ಳಿ ವಿಳಾಸ ತೋರಿಸಲಾಗಿದೆ ಎಂದರೆ ಸರಿ. ಫಿರ್ಯಾದಿಯಲ್ಲಿ ಚೆಕ್ಕನ್ನು ಯಾವ ದಿನಾಂಕದಂದು ಹಾಜರು ಮಾಡಲಾಗಿದೆ ಎಂದು ಬರೆದಿರುವುದಿಲ್ಲ. ನಾನು ಚೆಕ್ ಹಾಜರು ಮಾಡಿದ ಬಗ್ಗೆ pay in slip ಸಹ ಹಾಜರು ಮಾಡಿಲ್ಲ. ಚೆಕ್ಕಿನ ದಿನಾಂಕದಿಂದ 91 ದಿನಕ್ಕೆ ಚೆಕ್ಕನ್ನು ಬ್ಯಾಂಕಿಗೆ ಹಾಜರು ಮಾಡಲಾಗಿದೆ ಎಂದರೆ ಸುಳ್ಳು. ಆರೋಪಿ ನಿಪಿ-1 ನ್ನು ನಮ್ಮ ವಡಗಾಂವನ ಕಚೇರಿಯಲ್ಲಿ ಕೊಟ್ಟರು. ಚೆಕ್ ಯಾವ ದಿನಾಂಕದಂದು ಕೊಟ್ಟರು ನಿಖರವಾಗಿ ನೆನಪಿಲ್ಲ. ಅಗಸ್ಟ್ ತಿಂಗಳಲ್ಲಿ ಕೊಟ್ಟರು. ಆರೋಪಿ ಅಂದು post dated ಚೆಕ್ಕನ್ನು ಬರೆದುಕೊಟ್ಟರು. ಚೆಕ್ಕಿನ ಮೇಲೆ 20-08-2013 ಇದೆ ಎಂದರೆ ಸರಿ. 20-08-2013 ರಿಂದ 2 ತಿಂಗಳು ಮುಂಚಿತವಾಗಿ ನಿಪಿ-1 ಚೆಕ್ಕನ್ನು ಬರೆದುಕೊಟ್ಟರು. ಅಂದಾಜು 20-06-2013 ರಂದು post dated ಚೆಕ್ ಬರೆದುಕೊಟ್ಟಿರಬಹುದು.

2. ನಮ್ಮ ಶಿನೊಳ್ಳಿ ಆಸ್ಥಿಯನ್ನು ಮಾರಾಟ ಮಾಡುವುದರ ಬಗ್ಗೆ ಆರೋಪಿತರೇ ನಮ್ಮನ್ನು ವಿಚಾರಿಸಲು ಬಂದಿದ್ದರು. ಸ್ಥಿರ ಆಸ್ಥಿಯನ್ನು ಖರೀದಿ ಮಾಡುವ ಬಗ್ಗೆ ಆರೋಪಿತರು ಖರೀದಿಯಾದ ದಿನಾಂಕಕ್ಕಿಂತ ಒಂದು ದಿನ ಮುಂಚೆ ಬಂದಿದ್ದರೋ, ಒಂದು ವಾರ ಮುಂಚೆ ಬಂದಿದ್ದರೋ, ಒಂದು ತಿಂಗಳು ಮುಂಚೆ ಬಂದಿದ್ದರೋ ಅಥವಾ ಒಂದು ವರ್ಷ ಮುಂಚೆ ಬಂದಿದ್ದರೋ ನನಗೆ ಗೊತ್ತಿಲ್ಲ. ಸ್ಥಿರ ಆಸ್ಥಿಯ ಖರೀದಿಯು 01-07-2013 ರಂದು ಆಗಿದೆ ಎಂದರೆ ಸರಿ. ಆ ದಿನಾಂಕಕ್ಕಿಂತ ಒಂದೂವರೆ ತಿಂಗಳು ಮೊದಲು ಆಸ್ಥಿಯ ಖರೀದಿಯ ಬಗ್ಗೆ ವಿಚಾರಿಸಲು ಬಂದಿದ್ದರು ನನಗೆ ನೆನಪಿಲ್ಲ. ಆಸ್ಥಿಯ ಖರೀದಿ ವ್ಯವಹಾರದಲ್ಲಿ ನೇರವಾಗಿ ಖರೀದಿ ಪತ್ರ ಆಗಿದೆ ಆದರೆ ಖರೀದಿ ಕರಾರು ಆಗಿರುವುದಿಲ್ಲ. ಆರೋಪಿಯು ಖರೀದಿ ಮಾತುಕತೆಯಾದ ಸಂದರ್ಭದಲ್ಲಿ ಭದ್ರತೆಗಾಗಿ ಸಹಿ ಮಾಡಿದ blank ಚೆಕ್ಕನ್ನು ಕೊಟ್ಟಿದ್ದರು ಎಂದರೆ ಸುಳ್ಳು. ಖರೀದಿ ಪತ್ರದಲ್ಲಿ ಕಾಯ್ದೆಶೀರ ಕೌಟುಂಬಿಕ ಅಡಚಣೆಗಾಗಿ ಖರೀದಿ

ಕೊಡಲಾಗುತ್ತಿದೆ ಎಂದು ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿಮುಂದುವರೆದು ಆ ರೀತಿ format ಇರುತ್ತದೆ ಎಂದು ನುಡಿದಿರುತ್ತಾರೆ.

3. ಆರೋಪಿ 01-07-2013 ರಂದು ಎರಡು ಖರೀದಿ ಪತ್ರದ ಪ್ರಕಾರ 50 ಲಕ್ಷ ರೂ ನನ್ನ ಕುಟುಂಬಕ್ಕೆ ಕೊಟ್ಟು ಆಸ್ತಿಯನ್ನು ಖರೀದಿ ಮಾಡಿದ್ದರಿಂದ ಆರೋಪಿ ಆರ್ಥಿಕವಾಗಿ ಸದೃಢ ಇದ್ದರು ಎಂದರೆ ಸುಳ್ಳು. ನಿಪಿ-1 ನ್ನು ಆರೋಪಿಯೇ ನನ್ನ ಮುಂದೆಯೇ ಬರೆದುಕೊಟ್ಟಿದ್ದಾರೆ. ನಿಪಿ-1 ನ್ನು ಆರೋಪಿ ಬರೆದುಕೊಟ್ಟಿಲ್ಲ ಎಂದರೆ ಸುಳ್ಳು. ಆರೋಪಿ ಕೊಟ್ಟಿದ್ದಂತಹ ಸಹಿ ಮಾಡಿದ ಖಾಲಿ ಚೆಕ್ಕನ್ನು ದುರೂಪಯೋಗ ಮಾಡಿಕೊಂಡು ಆರೋಪಿಯ ವಿರುದ್ಧ ಸುಳ್ಳು ಫಿರ್ಯಾದಿಯನ್ನು ದಾಖಲಿಸಿದ್ದೇನೆ ಎಂದರೆ ಸುಳ್ಳು. ಮೇ 2013 ರಲ್ಲಿ 10 ಲಕ್ಷ ರೂ ಸಾಲ ಆರೋಪಿಗೆ ಕೊಡುವಷ್ಟು ಆರ್ಥಿಕ ಪರಿಸ್ಥಿತಿ ಇರಲಿಲ್ಲ ಎಂದರೆ ಸುಳ್ಳು.

**ಫಿರ್ಯಾದಿದಾರನ ಪರವಾಗಿ ಶ್ರೀ DAA ವಕೀಲರಿಂದ**

ಈ ಹಂತದಲ್ಲಿ ಫಿರ್ಯಾದಿ ಪರ ವಕೀಲರು ಸಮಯ ಕೋರಿದ ಕಾರಣ, ಸಮಯಾವಕಾಶ ನೀಡಿ ಸಾಕ್ಷಿಯ ಮುಂದು ವರೆದ ಪಾಟೀ ಸವಾಲನ್ನು ಮುಂದುೂಡಲಾಯಿತು.

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ**

**5 ನೇ ಪ್ರ.ದ.ನ್ಯಾ.ದಂ. ಗಳು, ಬೆಳಗಾವಿ**